ಜೋಶಿಯೆಡೆಗೆ ನೋಡಿದಾಗ ಅವನ ಕಣ್ಣಲ್ಲಿ ಮಿಂಚು. ಕೇತಕಿಯ ಎದೆಬಡಿತ ಹೆಚ್ಚಾಯಿತು. 'ಇವ್ನ ಕಣ್ಣಿನ ಸೆಳೆತದಿಂದ, ಈ ಮನುಷ್ಯನಿಂದ ದೂರ ಇರ್ಬೇಕಪ್ಪಾ' ಎಂದುಕೊಂಡು ಜೋಶಿಯನ್ನು ನೋಡಿದರೆ ಅದನ್ನು ಅರಿತವನಂತೆ ಜೋಶಿಯೂ ನಕ್ಕಾಗ ವಿಧಿಯಿಲ್ಲದೇ ಕೇತಕಿ ನಕ್ಕಳು. ಯಾಕೋ ಶಂಕರನ ತೋಳುಗಳಲ್ಲಿ ಅಡಗಬೇಕೆನಿಸಿತು. ಶಂಕರನ ಹತ್ತಿರ ಕೂಡಲೇ ಮಾತಾಡಬೇಕೆನಿತು.

ಊಟದ ಹೊತ್ತಿಗೆ ಮೊದಲು ಮೊಬೈಲು ಕೈಗೆತ್ತಿಕೊಂಡು ಶಂಕರನಿಗೆ ಕರೆ ಮಾಡಿದಳು. 'ಓಯ್ ಏನು ನಡೀತಿದೆ' ಎಂದು ತನ್ನ ಉಸಿರಾಟದಿಂದೇನಾದರೂ ಶಂಕರನಿಗೆ ತನ್ನ ಮನಸ್ಸಿನ ಓಲಾಟ ತಿಳಿಯಿತೇನೋ ಎನ್ನುವಂತೆ ಹಗುರವಾಗಿ ಮಾತಾಡಿದಳು. 'ಆಫೀಸಿನಲ್ಲಿದಿನಿ ಕಣೆ, ಬೆಳಿಗ್ಗೆ ತಾನೇ ಮಾತಾಡಿದ್ದಿ' ಎಂದು ಉದಾಸೀನ ತೋರಿದಾಗ, ಲಲ್ಲೆಗರೆವಂತೆ 'ಹುಂ... ನೆನಪಾಯಿತು' ಎಂದದ್ದಕ್ಕೆ 'ಹುಂ ನಾಳೆ ಬರ್ತಿಯಲ್ಲಾ, ರಾತ್ರೆ ಪೂರ್ತಿ ನೆನಪು ಮಾಡಿಸ್ತೀನಿ' ಎಂದು ಕೀಟಲೆಯ ನಗು ನಕ್ಕು ಫೋನನ್ನು, ಬಾಯ್ ಹೇಳುವ ಮೊದಲೇ ಇಟ್ಟುಬಿಟ್ಟ. 'ದುಷ್ಟ, ಯಾವತ್ತಾದ್ರೂ ಪೂರ್ತಿಮಾತು ಕೇಳಿಸಿಕೊಂಡಿದ್ದಾನಾ ಇವ್ನು. ನನ್ನ ಗಲಿಬಿಲಿ ಇವ್ನಿಗೆಲ್ಲಿ ಅರ್ಥ ಆಗ್ಬೇಕು' ಎಂದುಕೊಂಡು ಊಟದೆಡೆಗೆ ಬಂದ್ರೆ ಮುಕುಂದ ಜೋಶಿ, 'ಕೇತಕಿಜೀ, ಆಯಿಯೇ ನಾ' ಎಂದು ಕರೆದಾಗ ಅನಿವಾರ್ಯವಾಗಿ ಕೇತಕಿ, ಬೇಡೆಕರ್ ಮತ್ತು ಮುಕುಂದ್ ಜೋಶಿಯೊಂದಿಗೆ ಕೂತಳು. ಆದಷ್ಟು ಸಹಜವಾಗಿ ತನ್ನ ಉತ್ತೇಜಿತ ಮನಸ್ಸಿನ ಸೂಚನೆಯೂ ಸಿಗದಂತೆ ಮಾತಾಡಿದಳು. ಮುಕುಂದ್ ಜೋಶಿ, ಕೇತಕಿಯ ವಿವರಗಳನ್ನು ಕೇಳಿದಾಗ ತನ್ನ ವೇಲಣಕರ್ ಸರ್‌ನೇಮಿನ ಪುರಾಣ ಹೇಳಿದಳು. ಯಾಕೋ ಕುಲಕರ್ಣಿಯ ನೆನಪಾಯಿತು. ವ್ಯಕ್ತಿಯೊಬ್ಬ ಇಷ್ಟವಾದರೆ ಮಾತಿನ ಹರಿವೇ ಹೇಗೆ ಬದಲಾಗುತ್ತದೆ ಅಲ್ವೇ ಎಂದುಕೊಂಡಳು. ತನಗೆ ಮೆಚ್ಚುಗೆಯಾದವರೂ ತನ್ನನ್ನೂ ಮೆಚ್ಚುವವರೂ ಒಬ್ಬರೇ ಆಗಿದ್ದಾಗ ಮಾತ್ರ ಬಹುಶಃ ಮನುಷ್ಯ ಉಲ್ಲಸಿತನಾಗೋದು ಏನೋ! 'ಪುಣೆಯ ಶೋಧ ಸಂಸ್ಥಾನಕ್ಕೆ ಬನ್ನಿ, ಮುಂದಿನ ಸೆಮಿನಾರು ಅಲ್ಲೇ ಮಾಡೋಣಾ, ನೀವು ನಿಮ್ಮ ರೂಟ್ಸ್ ಇರೋ ಊರನ್ನು ನೋಡಬೇಕು; ಒಮ್ಮೆ ಅಲ್ವೇ, ಬೈದಿವೇ, ನಿಮ್ಮ ಮೂಲವಾದ ರತ್ನಾಗಿರಿಯಲ್ಲಿ ಎಷ್ಟು ಪ್ರಾಜೆಕ್ಟುಗಳು ನಡೆಯುತ್ತಿವೆ ಗೊತ್ತಿದೆಯೇ ನಿಮಗೆ? ಬನ್ನಿ, ವಿ ವಿಲ್ ಪ್ಲಾನ್ ಒನ್ ಟೂರ್. ಸಮಾನ ಆಸಕ್ತಿಯವ್ರು ಆಗಾಗ ಮೀಟ್ ಆಗ್ತಿರಬೇಕು, ನಿಮ್ಮ ಫೋನ್ ನಂಬರ್ ಕೊಡಿ' ಎಂದವನ ಮಾತಿಗೆ ಇಲ್ಲವೆನ್ನಲಾಗದೇ 'ಹಾಂ, ಖಂಡಿತ' ಎನ್ನುತ್ತ ನಂಬರ್ ಎಕ್ಸ್‌ಚೇಂಜ್ ಮಾಡಿಕೊಂಡರು.



ಎರಡನೇ ಸೆಶನ್ನೂ ನಿರಾತಂಕವಾಗಿ ಸಾಗಿತು. ಮುಕುಂದ್ ಜೋಶಿಯ ಅಧ್ಯಯನ ನಿಜಕ್ಕೂ ಅಮೇಝಿಂಗ್ ಅನಿಸಿತು. 'ಅಬ್ಬಾ ಅದೆಷ್ಟು ಕೆಲಸಗಳಿವೆ. ಈ ಮನಸ್ಸೂ ಒಂದು ತಹಬಂದಿಗೆ ಬಂದ್ರೆ ತನಗೂ ಇನ್ನಷ್ಟು ಕೆಲಸ ಇವನೊಂದಿಗೆ ಮಾಡಬಹುದೇನೋ' ಎನಿಸಿತು. ಸೆಮಿನಾರು ಮುಗಿಸಿ ರೂಮಿಗೆ ಬಂದು ಮಂಚದ ಮೇಲೆ ಬಿದ್ದುಕೊಂಡಳು. ಹೆಚ್ಚು ಹೊತ್ತು ಅವನೊಂದಿಗೆ ಇದ್ದು ತನ್ನ